# ಕನ್ನಡ ಕಾಳಜಿ: ಚೌಕಾಸಿ-ರಾಜಿ ಸಲ್ಲದು

ಕನ್ನಡದ ಕೆಲಸಕ್ಕೆ ಅಗತ್ಯವಿರುವ ಸಂಪನ್ಮೂಲಗಳನ್ನು ಮೊದಲು ಒದಗಿಸಿದ ನಂತರ ಇತರ ಭಾಷೆಗಳ ಬಗ್ಗೆ ಸರ್ಕಾರ ಯೋಚಿಸಬೇಕು. ಕನ್ನಡದ ಮಗುವನ್ನು ಅಳಲಿಕ್ಕೆ ಬಿಟ್ಟು ಮತ್ತೊಂದು ಭಾಷೆಯನ್ನು ಪೋಷಿಸಲು ಮುಂದಾಗುವುದು ಯಾವ ರೀತಿಯಲ್ಲೂ ಸಮರ್ಥನೀಯವಲ್ಲ.

ಸಂಸ್ಕೃತ ವಿಶ್ವವಿದ್ಯಾಲಯಕ್ಕಾಗಿ 100 ಎಕರೆ ಭೂಮಿ ಮತ್ತು 359 ಕೋಟಿ ರೂಪಾಯಿ ಅನುದಾನ ನೀಡುವ ರಾಜ್ಯ ಸರ್ಕಾರದ ನಿರ್ಧಾರ ಸಾರ್ವಜನಿಕ ಚರ್ಚೆಗೆ ಕಾರಣವಾಗಿದೆ. ಈ ಚರ್ಚೆ ಕನ್ನಡ ಮತ್ತು ಸಂಸ್ಕೃತ ಪರ–ವಿರೋಧದ ಸ್ವರೂಪವನ್ನೂ ಪಡೆದಿದೆ. ಕನ್ನಡ ಭಾಷೆ ತನ್ನ ಬೆಳವಣಿಗೆಯುದ್ದಕ್ಕೂ ಇತರ ಭಾಷೆಗಳೊಂದಿಗೆ ಸೌಹಾರ್ದ ಸಂಬಂಧ ಅನುಸರಿಸಿಕೊಂಡು ಬಂದಿದೆಯೇ ಹೊರತು ಸಂಘರ್ಷವನ್ನಲ್ಲ ಎನ್ನುವುದನ್ನು ಸಂಸ್ಕೃತ ವಿ.ವಿ. ಚರ್ಚೆಯ ಸಂದರ್ಭದಲ್ಲಿ ನಾವು ನೆನಪಿನಲ್ಲಿರಿಸಿಕೊಳ್ಳಬೇಕು. ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ದೊಡ್ಡ ಮೊತ್ತದ ಅನುದಾನ ನೀಡುವುದನ್ನು ಪ್ರಶ್ನಿಸುತ್ತಿರುವವರ ಟೀಕೆಯನ್ನು ಸಂಸ್ಕೃತ ಭಾಷೆಯ ವಿರೋಧದ ರೂಪದಲ್ಲಿ ನೋಡಬೇಕಾಗಿಲ್ಲ. ಅದು ಕನ್ನಡದ ಬಗೆಗಿನ ಕಾಳಜಿ ಮತ್ತು ಆತಂಕದಿಂದ ವ್ಯಕ್ತವಾಗಿರುವ ವಿರೋಧ.

ರಾಜ್ಯದ ಬಹುತೇಕ ವಿಶ್ವವಿದ್ಯಾಲಯಗಳು ಅನುದಾನದ ಕೊರತೆಯನ್ನು ಎದುರಿಸುತ್ತಿವೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ನಿವೃತ್ತರಿಗೆ ಸೌಲಭ್ಯಗಳನ್ನು ನೀಡಿಲ್ಲ. ಇಂಥ ಸಂದರ್ಭದಲ್ಲಿ ಸಂಸ್ಕೃತದ ಬಗ್ಗೆ ಸರ್ಕಾರಕ್ಕೆ ಪ್ರೀತಿ ಉಕ್ಕಿಬರುವುದನ್ನು ಸಹಜವೆಂದು ಭಾವಿಸಲಾಗುವುದಿಲ್ಲ. ಇನ್ನೊಂದೆಡೆ ಕೇಂದ್ರ ಸರ್ಕಾರ ಪ್ರಾದೇಶಿಕ ಭಾಷೆಗಳಿಗೆ ಅನುದಾನ ನೀಡುವ ವಿಷಯದಲ್ಲಿ ಬಿಗಿಗೈ ಆಗಿದ್ದು, ಸಂಸ್ಕೃತದ ವಿಷಯದಲ್ಲಿ ಮಾತ್ರ ಬಿಡುಗೈಯಾಗಿದೆ. ಈ ಇಬ್ಬಗೆ ನೀತಿಯೇ ಕನ್ನಡಿಗರಿಗೆ ಅಥವಾ ಇತರ ಭಾಷಿಕರಿಗೆ 'ಸಂಸ್ಕೃತ ಹೇರಿಕೆ'ಯಾಗಿ ಕಾಣಿಸಿದರೆ ಅದು ಅಸಹಜವೇನಲ್ಲ. ಪದವಿ ವಿದ್ಯಾರ್ಥಿಗಳಿಗೆ ಕನ್ನಡ ವಿಷಯವನ್ನು ಕಡ್ಡಾಯ ಮಾಡಿರುವುದನ್ನು 'ಸಂಸ್ಕೃತ ಭಾರತಿ ಟ್ರಸ್ಟ್' ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದನ್ನೂ ಸಂಸ್ಕೃತ ಹೇರಿಕೆ ಮತ್ತು ಪ್ರೀತಿಯ ರೂಪದಲ್ಲೇ ನೋಡಬೇಕು. ಸಂಸ್ಕೃತ ವಿಶ್ವವಿದ್ಯಾಲಯದ ಅಗತ್ಯವನ್ನು ಸಮರ್ಥಿಸುವವರು ಈ ಎಲ್ಲ ಸಂಗತಿಗಳನ್ನು ಗಮನಿಸಬೇಕು. ಈಗಾಗಲೇ ಅಸ್ತಿತ್ವದಲ್ಲಿರುವ ವಿಶ್ವವಿದ್ಯಾಲಯಗಳನ್ನು ಬಲಗೊಳಿಸುವುದು ಹಾಗೂ ಕನ್ನಡದ ಕೆಲಸಕ್ಕೆ ಅಗತ್ಯವಿರುವ ಸಂಪನ್ಮೂಲಗಳನ್ನು ಒದಗಿಸಿದ ನಂತರ ಸಂಸ್ಕೃತ ಕಟ್ಟುವ ಬಗ್ಗೆ ಸರ್ಕಾರ ಯೋಚಿಸಬೇಕೆನ್ನುವ ಕನ್ನಡಿಗರ ಅಪೇಕ್ಷೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಅದಕ್ಕೆ ಬದಲಾಗಿ, ಕನ್ನಡದ ಮಗುವನ್ನು ಅಳಲಿಕ್ಕೆ ಬಿಟ್ಟು ಸಂಸ್ಕೃತವನ್ನು ಪೋಷಿಸಹೊರಡುವುದು ಯಾವ ರೀತಿಯಲ್ಲೂ ಸಮರ್ಥನೀಯವಲ್ಲ.

ಸಂಸ್ಕೃತಕ್ಕೆ 359 ಕೋಟಿ ರೂಪಾಯಿ ಅನುದಾನ ನೀಡುತ್ತಿರುವ ಸರ್ಕಾರ, ಕನ್ನಡದ ಕೆಲಸಗಳಿಗೆ ನೀಡುತ್ತಿರುವ ಒತ್ತಾಸೆ ಯಾವ ಬಗೆಯದೆನ್ನುವುದನ್ನು ನೆನಪಿಸಿಕೊಳ್ಳಬೇಕು. ಕನ್ನಡ–ಕರ್ನಾಟಕದ ಹೆಸರಿನಲ್ಲಿರುವ ಅಕಾಡೆಮಿ, ಪ್ರಾಧಿಕಾರಗಳಿಗೆ ನೀಡುವ ಅನುದಾನ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಕುಟುಕು ಜೀವ ಹಿಡಿದುಕೊಂಡು ಒಳ್ಳೆಯ ದಿನಗಳಿಗಾಗಿ ಕಾಯುತ್ತಿರುವ ಸರ್ಕಾರಿ ಪೋಷಿತ ಸಾಂಸ್ಕೃತಿಕ ಸಂಸ್ಥೆಗಳಿಗೆ, ಆರ್ಥಿಕ ಅಪೌಷ್ಟಿಕತೆಯಿಂದಾಗಿ ಹೊಸ ಕಾರ್ಯಕ್ರಮಗಳ ಕನಸು ಕಾಣುವುದೂ ಸಾಧ್ಯವಾಗುತ್ತಿಲ್ಲ. 2020ರ ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ 'ಕನ್ನಡ ಕಾಯಕ ವರ್ಷ' ಆಚರಿಸುವುದಾಗಿ ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಪ್ರಕಟಿಸಿದ್ದರು. ತಂತ್ರಜ್ಞಾನ ಯುಗದಲ್ಲಿ ಕನ್ನಡದ ಬಳಕೆ ಮತ್ತು ಭಾಷೆಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ 'ಕನ್ನಡ ಕಾಯಕ ವರ್ಷ'ದಲ್ಲಿ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಹೇಳಿದ್ದರು. ನಮ್ಮ ಬದುಕನ್ನು ಆವರಿಸಿಕೊಂಡಿರುವ ತಂತ್ರಜ್ಞಾನಕ್ಕೆ ತಕ್ಕಂತೆ ಕನ್ನಡವನ್ನು ಅಭಿವೃದ್ಧಿಪಡಿಸುವ ಕನಸನ್ನು ಹಂಚಿಕೊಂಡಿದ್ದರು. ಆ ಘೋಷಣೆ ಮತ್ತು ಕನಸು ಈಗ ಯಾವ ಹಂತದಲ್ಲಿದೆ ಎನ್ನುವುದನ್ನು ಸರ್ಕಾರವೇ ಸ್ಪಷ್ಟಪಡಿಸಬೇಕು.

ನಾಲ್ಕೈದು ವರ್ಷಗಳಿಂದ ರಾಜ್ಯ ಚಲನಚಿತ್ರ ಪ್ರಶಸ್ತಿಗಳು ವಿತರಣೆಯಾಗಿಲ್ಲ. ಕನ್ನಡ ಸಿನಿಮಾಗಳಿಗೆ ನೀಡಲಾಗುತ್ತಿದ್ದ ಸಬ್ಸಿಡಿಯನ್ನೂ ನೀಡಲಾಗಿಲ್ಲ. ಕನ್ನಡ ಶಾಲೆಗಳ ಸ್ಥಿತಿಯಂತೂ ದೇವರಿಗೇ ಪ್ರೀತಿ. ಮೂಲಭೂತ ಸೌಕರ್ಯಗಳು ಮತ್ತು ಶಿಕ್ಷಕರ ಕೊರತೆಯಿಂದ ಬಳಲುತ್ತಿರುವ ಶಾಲೆಗಳು ವರ್ಷದಿಂದ ವರ್ಷಕ್ಕೆ ಮಕ್ಕಳಿಂದ ದೂರವಾಗುತ್ತಿವೆ. ಕನ್ನಡ ಶಾಲೆಗಳನ್ನು ಬಲಪಡಿಸುವ ಸರ್ಕಾರದ ಇಚ್ಛಾಶಕ್ತಿ ಕಾಗದದ ಮೇಲಷ್ಟೇ ಇದೆ. ಬರಗೂರು ರಾಮಚಂದ್ರಪ್ಪನವರು ಸಿದ್ಧಪಡಿಸಿದ್ದ ಸಾಂಸ್ಕೃತಿಕ ನೀತಿ ವರದಿಯನ್ನು ಜಾರಿಗೊಳಿಸುವಂತೆ 2017ರ ಅಕ್ಟೋಬರ್‌ನಲ್ಲೇ ಸರ್ಕಾರ ಸೂಚಿಸಿದ್ದರೂ, ಇದುವರೆಗೆ ಸಾಂಸ್ಕೃತಿಕ ನೀತಿ ಜಾರಿಗೊಂಡಿಲ್ಲ. ಹೀಗೆ, ಕನ್ನಡದ ಹಿತಾಸಕ್ತಿಗೆ ಸಂಬಂಧಿಸಿದಂತೆ ಸರ್ಕಾರ ರಾಜಿ ಮತ್ತು ಚೌಕಾಸಿಯಲ್ಲಿ ತೊಡಗಿದ್ದು, ಸಂಸ್ಕೃತದ ಬಗ್ಗೆ ಅತಿ ಪ್ರೀತಿ ವ್ಯಕ್ತಪಡಿಸಿದರೆ ಅದರ ಬಗ್ಗೆ ಸಹಜವಾಗಿಯೇ ವಿರೋಧ ಮತ್ತು ಅನುಮಾನ ವ್ಯಕ್ತವಾಗುತ್ತದೆ. ಈ ಅನುಮಾನವನ್ನು ಪರಿಹರಿಸಬೇಕಾದ ಸರ್ಕಾರದ ಪ್ರತಿನಿಧಿಗಳು, 'ಸಂಸ್ಕೃತವನ್ನು ಆತ್ಮದ ಭಾಷೆ' ಎಂದು ಬಣ್ಣಿಸುವುದು ಆತ್ಮವಂಚನೆಯೆಂದೇ ಹೇಳಬೇಕಾಗುತ್ತದೆ. ಕನ್ನಡಿಗರ ಪಾಲಿಗೆ ಆತ್ಮದ ಭಾಷೆ, ಹೃದಯದ ಭಾಷೆ, ಬೌದ್ಧಿಕ ಭಾಷೆ ಎಲ್ಲವೂ ಕನ್ನಡವೊಂದೇ. ಉಳಿದವೆಲ್ಲ ಅನ್ಯಭಾಷೆಗಳು.

■ ರಘುನಾಥ ಚ.ಹ.



ಈಶ್ವರ್